ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮ್ಯುನಿಸಿಪಾಲಿಟಿಯಲ್ಲಿ ನಡಿಯತಕ್ಕ ಕಾಂಗ್ಯಾರಿಗಳನ್ನು ಮಾಡಿಸುವ ಬಗ್ಯಾಗಲಿ ಸಾಮಾನುಗಳನ್ನು ಅಂದರೆ ಮೆಟೀರಿಯಲ್ ಟೂಲ್ಸ್ ಮೊವಲಾದವುಗಳನ್ನು ಸಪ್ಲೈ ಮಾಡತಕ್ಕ ಬಗ್ಯಾಗಲಿ ವುದ್ಯುಕ್ತರಾದ ಜನರು ಮತ್ತು ಸಪ್ಲೈ ಮಾಡುತಿರುವವರುಗಳ ಹೆಸರುಗಳನ್ನು ಅಡ್ರೆಸ್‌ಗಳನ್ನು ಮ್ಯುನಿಸಿಪಾಲ್ ಹೆಡ್ ಆಫಿಸಿನಲ್ಲಿ ಇಡಲ್ಪಟ್ಟು ಇರುವ ಬುಕ್ಕಿನಲ್ಲಿ ರಿಜಸ್ಟರ್ ಮಾಡಿಸತಕ್ಕದ್ದಿದೆ.

ಆಫಿಸ್ ಹಗಲು 11ರ ಲಾಗಾಯಿತು 5—30ರ ವರುವಿಗೆ ತೆರದು ಯಿರುವದು.

ಬೆಂಗಳೂರು ಸಿಟಿ ಮ್ಯುನಿಸಿಪಾಲ್ ಪ್ರಸೀಡೆಂಟರವರಲ್ಲಿಗೆ ಕೊಡುವ ಅರ್ಜಿಗಳಿಗೆ ಆಗುವ ಜವಾಬುಗಳನ್ನು ಸುಲಭವಾಗಿ ತಿಳಿದು ಕೊಳ್ಳುವ ಬಗ್ಯೆ ಅರ್ಜಿದಾರ್‌ಗಳಿಗೆ ಯಿದರಿಂದ ತಿಳಿಯಪಡಿಸುವದೇನಂದರೆ:—

ಅರ್ಜಿಗಳು ಕೊಟ್ಟಬಳಿಕ 8 ದಿವಸಗಳ ವಂವಿಗೂ ಜವಾಬ್ ತಲಪದೆ ಯಿದ್ದಲ್ಲಿ ಅರ್ಜಿದಾರ್‌ಗಳು ನಮ್ಮ ಆಫಿಸ್ ಮ್ಯಾನೇಜರರ ರೂಬರೂಬ್ ಹಾಜರಾಗಿ ಜವಾಬುಗಳನ್ನು ತೆಗದುಕೊಳ್ಳತಕ್ಕದ್ದು. ಬಂದು ವೇಳೆ ಅರ್ಜಿಗಳಿಗೆ ಜವಾಬ್ ಆಗದೆ ಇದ್ದಪಕ್ಷದಲ್ಲಿ ಅರ್ಜಿದಾರ್ರು ಆ ಸಂಗತಿಯನ್ನು ಕೂಡ್ಲೆ ಪ್ರಸೀಡೆಂಟರವರ ಬಳಿ ರೂಬರೂ ಹಾಜರಾಗಿ ತಿಳಿಯಪಡಿಸತಕ್ಕದ್ದು.

ಅರ್ಜಿಗಳು ಫೈಸಲಾದ ತಾರೀಖು ತಿಳಿಸಲು ಬಂದು ಮಿನೋ ತಯಾರ್ಮಾಡಿ ಮ್ಯುನಿಸಿಪಾಲ್ ಆಫಿಸಿನಲ್ಲಿ ಚಿಕಟಾಯಿಸಲ್ಪಡುವದು.

ತಾರೀಖು 18ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ವೆಸ್ಟ್ ಎಕ್ಸ್‌ಟೆರ್ಷನ್‌ನಲ್ಲಿ ಖಾಲೀಯಿರುವ ಇದರ ಕೆಳಗೆ ನಮೂದಿಸಿರುವ ನಂಬರುಗಳ ನಿವೇಶನಗಳನ್ನ ಚಾಲತಿ ಇಸವಿ ಜುಲೈ 11 ಮತ್ತು 18ನೇ ತಾರೀಖುಗಳ ಪ್ರಾತಃಕಾಲ 7 ಘಂಟೆಗೆ ಆಯಾಯ ಜಮೀನ್ ಬಳಿಯಲ್ಲೇ ಹರಾಜುಮಾಡಿಸಲ್ಪಡುತ್ತೆಯಾಗಿ ಇಷ್ಟವುಳ್ಳವರು ಹಾಜರಿದ್ದು ಸವಾಲ್ ಮಾಡಿ ಪಡದುಕೊಳ್ಳಬಹುದು.

2. ಸವಾಲ್ ಖೈದಾದ ಕೂಡ್ಲೆ ಚಡಸವಾಲ್‌ದಾರ್ರು ಸವಾಲ್ ಮೊಬಲಗಿನ ನಾಲ್ಕರಲ್ಲಿ ಬಂದು ಹಿಸ್ಸೇ ಮೊಬಲಗನ್ನ ಡಿಪಾಜಿಟ್ಟಾಗಿ ಹಾಜರ್ಮಾಡಿ ಮಂಜೂರೀ ಆರ್ಡರ್ ಕೊಟ್ಟು 7 ದಿವಸದೊಳಗಾಗಿ ಬಾಕಿ ಮೊಬಲಗು ಪೂರಾ ಪಾವತಿಮಾಡಿ ರಸೀತಿ ಪಡದು ಜಮೀನ್ ಸುಧರ್ದು ಮಾಡಿಕೊಳ್ಳಬೇಕು.

3. ಹಾಗೆ ಸುಧರ್ದು ಮಾಡಿಕೊಂಡ 6 ತಿಂಗಳೊಳಗಾಗಿ ಕಟ್ಟಡವನ್ನ ಕಟ್ಟಿಕೊಳ್ಳಲು ಪ್ಲಿಂತ್‌ಹಾಜರ್ಮಾಡಿ ಲೈಸೆನ್ಸ್ ಪಡದು ಕಟ್ಟಡವನ್ನ ಪೂರ್ತಿಸಬೇಕು. ಇದಕ್ಕೆ ತಪ್ಪಿದಲ್ಲಿ ಲುಕ್ಸಾನಿಗೆ ಯಾವ ಈಡೂ ಯಿಲ್ಲದೆ ನಿವೇಶನವನ್ನ ಬೋರ್ಡಿಗೆ ಕೇರಿಸಿಕೊಂಡು ಹರಾಜು ಮಾಡಿನಲ್ಲಡುತ್ತೆ.

4. ಸವಾಲ್ ಖೈದಾದ ಕೂಡ್ಲೆ ಡಿಪಾಜಿಟ್ಟು ಹಾಜರ್ಮಾಡದೆಯಾಗಲಿ ಅಥವಾ ಮಂಜೂರಿ ಆರ್ಡರ್ ಪಡದ ಏಳು ದಿವಸದೊಳಗಾಗಿ ಪೂರಾ ಮೊಬಲಗು ಪಾವತಿ ಮಾಡದೆಯಾಗಲಿ ತಪ್ಪಿದಲ್ಲಿ ಲುಕ್ಸಾನಿಗೆ ಜಡ್ ಸವಾಲ್‌ದಾರನ ಜವಾಬ್‌ದಾರೀ ಮೇಲೆ ಸೈಟ್ ಪುನಹ ಹರಾಜು ಮಾಡಿಸಲ್ಪಡುತ್ತೆ. ಈ ಹರಾಜಿನಲ್ಲಿ ನಫೆ ಒಂದರ ಬೋರ್ಡಿಗೆ ಸೇರಿದ್ದಾಗಿ ಯಿರುತ್ತೆ.

5. ಯಾವ ಕಾರಣವನ್ನೂ ತಿಳಿಸದೆ ಯಾವ ಸವಾಲನ್ನಾಗಲಿ ಅಂಗೀಕರಿಸುವ ಯಾ ನಿರಾಕರಿಸುವ ಬಾಧ್ಯತೆಯನ್ನು ಕೆಳಗೆ ಸೈ ಮಾಡಿರುವರು ವುಳಿಸಿಕೊಂಡು ಇರುತ್ತಾರೆ.

ತಾರೀಖು 20ನೇ ಮಾಹೆ ಜೂ ಸ್ರ 1896ನೇ ಇಸವಿ.

ಸೈಟ್ ನಂಬರು		ಹರಾಜು ತಾರೀಖು	ಸೈಟ್ ನಂಬರು		ಹರಾಜು ತಾರೀಖು
106	..		113	..	
108	..	ಚಾಲತಿ ಇಸವಿ	114	..	ಚಾಲತಿ ಇಸವಿ ಜು
109	..	ಜುಲೈ 11ನೇ	115	..	ಲೈ 18ನೇ ತಾರೀಖು
110	..	ತಾರೀಖು.	116	..	
111	..		117	..	
112	..		119	..	

ತಾರೀಖು ನೇ ಜೂ ಸ್ರ 1896.

ಈ ಕೆಳಗೆ ತೋರಿಸಿ ಇರುವ ಸಾಮಾನುಗಳು ಬೇಕಾಗಿ ಇರುವದ್ದರಿಂದ ಇಚ್ಛೈಯುಳ್ಳವರು ಸರಬರಾಯಿ ಮಾಡಲು ಟೆಂಡರ್‌ಗಳನ್ನ ಕೊಡಬಹುದು.

50 ಕಬ್ಬಿಣದ ಗ್ಯಾಲವಾ ನೈಬರ್ ಬಾಬತು ಕಚರಾ ತೊಟ್ಟಿಗಳು ಮೂರು ಅಡಿ ಯತ್ತರ ಯರಡು ಅಡಿ ಸುತ್ತಳತೆಯುಳ್ಳದ್ದು.
50 ಚರಂಡಿಗಳ ಉದಯೋಗಕ್ಕಾಗಿ ಕಬ್ಬಿಣದ ಕಂಬಿಗಳು.
50 ಕಬ್ಬಿಣದ ಲ್ಯಾಂಪೋಸ್ಟ್‌ಯಾನೆ ದೀಪದ ಕಂಭಗಳು.
ಇವುಗಳ ವಿಷಯವಾಗಿ ವಿಶೇಷ ತಪ್ಶೀಲ್ ತಿಳಿಯಬೇಕಾದಲ್ಲಿ ಸಿಟಿ ಮ್ಯುನಿಸಿಪಲ್ ಆಫಿಸಿಗೆ ಬಂದು ತಿಳಿದುಕೊಳ್ಳತಕ್ಕದ್ದು.

ತಾರೀಖು ನೇ ಜೂ ಸ್ರ 1896.

ಕಿಲ್ಲೆ ಆಗಳತೆಯಲ್ಲಿ ಕಲ್ಲುಗಳನ್ನ ಖರೀದಿಗೆ ತೆಗದುಕೊಂಡಿರುವ ಅಕೇಷ ಜನರಿಗೂ ಇದರಿಂದ ತಿಳಿಯಪಡಿಸುವದೇನಂದರೆ,—1896ನೇ ಜುಲೈ ಗುರ್ಯ ಲಾಗಾಯತು ಮೂರು ತಿಂಗಳ ವಳಗಾಗಿ ಕಿಲ್ಲೆ ಆಗಳತೆಯಲ್ಲಿ ವಿಕ್ರಯಿಸಲ್ಪಟ್ಟಿರುವ ಕಲ್ಲುಗಳನ್ನ ಆ ಸ್ಥಳದಿಂದ ಸಾಗಿಸಿಕೊಂಡು ಹೋಗತಕ್ಕದ್ದು. ತಪ್ಪಿದಲ್ಲಿ ಮ್ಯುನಿಸಿಪಾಲಿಟಿಗೆ ಕೇಂಸಿಕೊಳ್ಳಲ್ಪಡುವದು.

1896ನೇ ಇಸವಿ ಸೆಪ್ಟಂಬರ್ 30ನೇ ತಾರೀಖಿನ ತರುವಾಯ ಸಾಗಿಸಲು ಅಪ್ಪಣೆ ಕೊಡುವದಿಲ್ಲ.

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.